ತಡೆಗಟ್ಟಲಿಕ್ಕೆ ಮಾಡಿದ್ದಾರೋ ಅದೇ ರೀತಿ ಇಲ್ಲಿಯೂ ಪ್ರಯತ್ನ ಆಗಬೇಕು ಎನ್ನುವಂಥ ಮಾತು ಬಂದಾಗ ಮಾನ್ಯ ಸಚಿವರು ಕೇಂದ್ರಕ್ಕೆ ಮನವಿ ಮಾಡಿ ಕೊಂಡಿದ್ದೇವೆ ಎಂದು ಹೇಳಿದರು. ಆದು ಆಧ್ಯಯನ ತಂಡ ಬಂದು ಹೋದನಂತರ ಆಪರ ವರದಿಯನ್ನು ನೋಡಿದಾಗ ಮಂಗಳೂರು ತಾಪುರೆ ಉಡುಪಿಯವರೆಗೆ ಮಾತ್ರ ಇರುತ್ತದೆ. ಮುಂದೆ ಕುಂದಾಪುರ ತಾಲ್ಲೂಕು ಇದೆ. ಮಾನ್ಯ ಪ್ರತಾಪ ಚಂದ್ರ ಶೆಟ್ಟರು ಹೇಳುತ್ತಾ ಇರುತ್ತಾರೆ. ಸಂಪರ್ಕ ರೋಡ್‌ಗಳು ಹಾಳಾಗುತ್ತವೆ. ನನ್ನ ಕ್ಷೇತ್ರದಲ್ಲಿ ಪರಿವಂತೆ ಎನ್ನುವಂಥ ಭಾಗದಲ್ಲಿ ನ್ಯಾಷನಲ್ ಹೈವೇ ಪೈಪ್‌ಲೈನ್ ಮಾಡುವಂತಾದ್ದು ಒಂದನ್ನು ಬಿಟ್ಟರೆ ಉಳಿದ ಕಡೆ ಯಾವ ಕೆಲಸವೂ ಆಗಲಿಲ್ಲ. ಸಮುದ್ರದ ಕೊರೆತ ಒಂದು ಕಡೆ. ಇನ್ನೊಂದು ಕಡೆ ಉಪ್ಪಿನ ಕುದುರು ಎನ್ನುವಂಥ ಭಾಗ ಇದೆ. ಅನೇಕ ಭಾಗಗಳಲ್ಲಿ ಕುದುರಿನ ಭಾಗವೇ ಸಮುದ್ರಕ್ಕೆ ಸೇರುತ್ತಿದೆ. ತೆಂಗಿನ ಮರಗಳು ಹೋಗುತ್ತಿವೆ. ಮನೆಗಳು ಹೋಗುತ್ತಿವೆ ಕೆಲವು ಭಾಗಗಳಲ್ಲಿ ಪ್ರೊಟೆಕ್ಷನ್ ಮಾಡಲಿಕ್ಕೆ ಸಾಧ್ಯವಿದೆ. ಕೆಲವು ಕಡೆ ರೈತರೇ ಕಟ್ಟುಕೊಂಡಿದ್ದಾರೆ. ರೈತರಿಂದ ಮಾಡಿದಂಥ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಭೂಸುಧಾರಣಾ ಕಾಯಿದೆ ಬಂದಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿಕ್ಕ ರೈತರು ಜಾಸ್ತಿ ಇದ್ದಾರೆ. ಆದುದರಿಂದ ಈ ಕೆಲಸವನ್ನು ಸರ್ಕಾರ ಸಮಗ್ರವಾಗಿ ಮಾಡಿಕೊಡಬೇಕು ಎನ್ನುವಂಥ ಮಾತನ್ನು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷರು ಈಗಾಗಲೇ ಸಮಯವನ್ನು ನಿಗದಿ ಮಾಡಿದ್ದಾರೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ನನಗೆ ಇಷ್ಟು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇವೊತ್ತು ನಾನ್ ಆಫಿಷಿಯಲ್ ಬಿಸಿನೆಸ್ ಡೇ. ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಒಂದು ಪ್ರಕಟಣೆ ಇದೆ.

ANNOUNCEMENT

MR. SPEAKER.—I have received the following message from the Chairman, Legislative Council :

> As required by Rules 114 of the Rules of procedure and Conduct of Business in Legislative Council, I send herewith the following Bills which have been agreed to by the Legislative Council on 9-8-1985. without amendments.
>
> Name of the Bills:
>
> 1 The Karnataka Money Lenders (Amendment) Bill, 1985
>
> 2 The Karnataka pawn Brokers (Amendment) Bill, 1985.
>
> 3 The Karnataka Essential Articles (Control) Bill 1985.

ಇಂದಿನ ಸಭೆಯನ್ನು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ಐದು ಗಂಟೆ ಹತ್ತು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧೨ನೇ ಆಗಸ್ಟ್ ೧೯೮೫ರ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)

———